# ಪಾರ್ಕಿಂಗಪ್ಪ ಪಾರ್ಕಿಂಗ್!



**ಹೊರಗೆ ಹೋದಾಗ ಬಯಲು ಶೌಚಕ್ಕೆ ಖಾಲಿ ಜಾಗ ಹುಡುಕುವಂತೆ, ಪಾರ್ಕಿಂಗ್‌ಗೆ ಜಾಗ ಹುಡುಕಬೇಕಾಗಿದೆ. ಮನೆ ಕಟ್ಟುವಾಗಲೂ ಶೌಚಾಲಯದಷ್ಟೇ ಪಾರ್ಕಿಂಗ್ ಜಾಗಕ್ಕೂ ಪ್ರಾಶಸ್ತ್ಯ ದೊರೆತಿದೆ.**

■ ನಳಿನಿ ಟಿ. ಭೀಮಪ್ಪ

ಶಾಪಿಂಗ್‌ಗೆ ನನ್ನನ್ನು ಕಾರಿನಲ್ಲಿ ಕರ್ಕೊಂಡು ಹೋಗ್ರೀ ಅಂದ್ರೆ ಸಾಕು ಯಜಮಾನರು ಕೈ ಮುಗಿದುಬಿಡುತ್ತಾರೆ.

‘ನೋಡು ಮಾರಾಯ್ತೀ, ಕಾರು ತಂದ್ರೆ ತರಬಹುದು, ಅಲ್ಲಿ ಪಾರ್ಕಿಂಗ್‌ಗೆ ಜಾಗ ಹುಡುಕೋಕಾಗಲ್ಲ. ಪಾರ್ಕಿಂಗ್ ಜಾಗ ಸಿಗೋ ಹೊತ್ತಿಗೆ ನಿನ್ನ ಶಾಪಿಂಗೇ ಮುಗಿದುಹೋಗಿರುತ್ತೆ. ಸಿಟಿ ಬಸ್ಸಿದೆ ಅದಕ್ಕೆ ಹೋಗು, ಎಷ್ಟು ಬೇಕಾದ್ರೂ ಸಾಮಾನು ಹಾಕ್ಕೊಂಡು ಬರಬಹುದು. ಇಲ್ಲ ಅಂದ್ರೆ ಹೋಗ್ತಾ ಬರ್ತಾ ಆರಾಮಾಗಿ ಆಟೊ ಮಾಡ್ಕೊಂಡು ಹೋಗು. ನಾನೇ ಬರಬೇಕೂ ಅಂದ್ರೆ ಸ್ಕೂಟಿನೋ, ಬೈಕೋ ತರ್ತೀನಿ, ಅದಾದ್ರೆ ಎಲ್ಲೋ ಒಂದು ಮೂಲೇಲಿ ನಿಲ್ಲಿಸಬಹುದು, ಆಗಬಹುದಾ’ ಅಂತಾ ಕೇಳ್ತಾರೆ.

ಮೊನ್ನೆ ಹೀಗೇ ನನ್ನನ್ನು ಶಾಪಿಂಗ್ ಕರೆದುಕೊಂಡು ಹೋಗಿ, ಎಲ್ಲಿಯೂ ಪಾರ್ಕಿಂಗ್ ಸಿಗದೆ, ನಾನು ಶಾಪಿಂಗ್ ಮುಗಿಸಿ ಬರುವ ತನಕ ಸರ್ಕಲ್‌ನಲ್ಲೇ ಮ್ಯೂಸಿಕಲ್ ಚೇರ್ ಆಟ ಆಡುತ್ತಾ ‘ಫೈರ್ ಇನ್ ದ ಮೌಂಟೇನ್ ರನ್ ರನ್ ರನ್’ ಎಂದು ತಿರುಗುವ ಹಾಗೆ ನಿಧಾನವಾಗಿ ಕನಿಷ್ಠ ಇಪ್ಪತ್ತೈದು ಬಾರಿ ರೌಂಡ್ ಹೊಡೆಯುತ್ತಲೇ ಟೈಮ್ ಪಾಸ್ ಮಾಡಿದ್ದರು. ಅಂದಿನಿಂದ ಕಾರನ್ನು ಬೇರೆ ಊರಿಗೆ ತರುತ್ತಾರೆಯೇ ಹೊರತು, ಊರಿನಲ್ಲಿದ್ದಾಗ ಬೆಚ್ಚಗೆ ಹೊದಿಸಿ ಇಟ್ಟಿರುತ್ತಾರೆ.